# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6446/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 11/9/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಹೆಚ್.ಎಸ್.ಜಗದೀಶ್ ಬಿನ್ ಈರೇಗೌಡ, ಹೊನಗನಹಳ್ಳಿ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ಹೆಚ್.ಎಸ್.ಜಗದೀಶ್ ಬಿನ್ ಈರೇಗೌಡ, ಹೊನಗನಹಳ್ಳಿ, ಕೊಣನೂರು ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಕಟ್ಟೆಪುರದ ಕಾವೇರಿ ನದಿಯ ಎಡದಂಡೆ ಮತ್ತು ಬಲದಂಡೆ ನಾಲಾ ಆಧುನೀಕರಣ ಮಾಡಲೆಂದು ಎಸ್.ಎನ್.ಸಿ. ಪವರ್ ಕಾರ್ಪೊರೇಷನ್ ಕಂಪನಿಯವರಿಗೆ ಕಾಮಗಾರಿ ನೀಡಿದ್ದು, ಅವರು ಕಾಮಗಾರಿ ಆರಂಭಿಸಿದಾಗಿನಿಂದಲೂ ಅನೇಕ ಕಡೆ ನಾಲೆಯ ಸಿಮೆಂಟ್ ಲೈನ್ ಕುಸಿದುಹೋಗಿದ್ದು, ಕಳಪೆ ಕಾಮಗಾರಿ ಮಾಡಿರುತ್ತಾರೆ. ಈ ಬಗ್ಗೆ ಹಲವಾರು ಬಾರಿ ಅಭಿಯಂತರರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರು ದೂರಿನಲ್ಲಿ ನಮೂದಿಸಿರುವ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಿ ದಾಖಲಾತಿಗಳ ಸಮೇತ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ವರದಿಯನ್ನು ನೀಡಿರುತ್ತಾರೆ.

"ಅರಕಲಗೂಡು ತಾಲ್ಲೂಕು, ರಾಮನಾಥಪುರ ಹೋಬಳಿಯ ಕಟ್ಟೇಪುರ ಗ್ರಾಮದಲ್ಲಿ ಕಾವೇರಿ ನದಿಗೆ ಅಣೆಕಟ್ಟು ನಿರ್ಮಾಣ ಮಾಡಿದ್ದು, ಈ ಅಣೆಕಟ್ಟನ್ನು ಕೃಷ್ಣರಾಜ ಅಣೆಕಟ್ಟು ಎಂಬುದಾಗಿ ಕರೆಯಲಾಗುತ್ತಿದ್ದು, ಅಣೆಕಟ್ಟಿಯಿಂದ ರೈತರ ಜಮೀನುಗಳಿಗೆ ನೀರು ಹರಿಸುವ ಸಲುವಾಗಿ ಬಲದಂಡೆ ಮತ್ತು ಎಡದಂಡೆ ಕಾಲುವೆಗಳ ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮ ನಿಯಮಿತ ಕೊಣನೂರು ರವರ ವತಿಯಿಂದ ಬೆಂಗಳೂರಿನ ಮೆ:ಎಸ್.ಎನ್.ಸಿ. ಪವರ್ ಕಾರ್ಪೊರೇಷನ್ ಕಂಪನಿ ಮೂಲಕ ನಿರ್ವಹಿಸಲಾಗಿರುತ್ತೆ.

ಈ ಕಾಮಗಾರಿಯನ್ನು ಹಾಸನ ಜಿಲ್ಲಾ ವ್ಯಾಪ್ತಿಗೆ ಸಂಬಂಧಪಟ್ಟಂತೆ ಪೂರ್ಣಗೊಳಿಸಲಾಗಿದ್ದು, ಕಾಲುವೆಗಳ ಎರಡು ಬದಿಯಲ್ಲಿ ಹಾಕಲಾಗಿರುವ ಸಿಮೆಂಟ್ ಕಾಂಕ್ರಿಟ್ ಬಿರುಕು ಬಿಟ್ಟಿದ್ದು, ಬಿರುಕುಗಳ ಮಧ್ಯೆ ಹಾಗೂ ಎರಡೂ ಬದಿಗಳಲ್ಲಿ ಮರ ಹಾಗೂ ಕುರುಚಲು ಗಿಡಗಳು ಬೆಳೆದಿರುವುದು ಕಂಡುಬಂದಿರುತ್ತದೆ.

ಕಾಲುವೆಗಳ ಎರಡೂ ಬದಿಗಳಲ್ಲಿ ಕಾಂಕ್ರಿಟ್ ತಡೆಗೋಡೆ ಅಲ್ಲಲ್ಲಿ ಕುಸಿದಿರುವುದು ಕಂಡುಬಂದಿದ್ದು ಬಹುತೇಕ

1. CH 200(5) ರಿಂದ CH 300(5)
2. CH 300(4) ರಿಂದ CH 400(4)
3. CH 500(5) ರಿಂದ CH 600(5), ಎಂದು ಗುರುತಿಸಿ ನಾಲಾ ಬದಿಯಲ್ಲಿ ನೆಡಲಾಗಿರುವ ಕಲ್ಲುಗಳ ಮಧ್ಯೆ ಕಾಂಕ್ರಿಟ್ ತಡೆಗೋಡೆ ಬಹುತೇಕ ಕುಸಿದಿರುವುದು ಕಂಡುಬಂದಿರುತ್ತೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.02, ಹಾರಾಂಗಿ ನಾಲಾ ಉಪ ವಿಭಾಗ, ಕೊಣನೂರು, ಅರಕಲಗೂಡು ತಾಲ್ಲೂಕು ರವರು ಈ ಕಚೇರಿಯಿಂದ ದಿ.13/6/2017 ರಂದು ಈ ವರದಿಯ ಕಂಡಿಕೆ 2 ರಲ್ಲಿ ಕೋರಿರುವ ಮಾಹಿತಿಗೆ ಸಂಬಂಧಿಸಿದಂತೆ ದಿ.19/7/2017 ರಂದು ಸದರಿಯವರು ದಾಖಲೆಗಳ ಪ್ರತಿಗಳೊಂದಿಗೆ ಮಾಹಿತಿ ಒದಗಿಸಿ ಸಂ.ಹಾನಾಉವಿ2/ಕೊ/ಕೊಣನೂರು/2017-18/194-96 ರಡಿ ಈ ಕಚೇರಿಗೆ ಪತ್ರ ಬರೆದುಕೊಂಡಿದ್ದು, ಈ ಪತ್ರ ಮತ್ತು ದಾಖಲೆಗಳ ಪರಿಶೀಲನೆಯಿಂದ ಕಟ್ಟೆಪುರ ಎಡ ಹಾಗೂ ಬಲದಂಡೆ ಕಾಮಗಾರಿಯನ್ನು ದಿ.24/5/2010 ರಂದು ಪ್ರಾರಂಭಿಸಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು 16 ತಿಂಗಳ ಕಾಲಾವಧಿಯನ್ನು ನೀಡಿ ಮೆ:ಎಸ್.ಎನ್.ಸಿ. ಪವರ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರಿಗೆ ವಹಿಸಿಕೊಡಲಾಗಿದ್ದು, ಕಾಮಗಾರಿಯು ಇನ್ನು ಪೂರ್ಣಗೊಂಡಿರುವುದಿಲ್ಲ ಎಂಬುದಾಗಿ ತಿಳಿದು ಬಂದಿರುತ್ತದೆ.

ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಕಟ್ಟೆಪುರ ಗ್ರಾಮದ ಕಾವೇರಿ ನದಿಯ ಎಡದಂಡೆ ಮತ್ತು ಬಲದಂಡೆ ನಾಲಾ ಕಾಮಗಾರಿ ನಡೆದ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ವೇಳೆ ಕಾಮಗಾರಿಯಲ್ಲಿ ಕಾಲುವೆಗಳ ಎರಡೂ ಬದಿಯಲ್ಲಿ ಹಾಕಲಾಗಿರುವ ಸಿಮೆಂಟ್ ಕಾಂಕ್ರಿಟ್ ಬಿರುಕು ಬಿಟ್ಟಿದ್ದು, ಬಿರುಕುಗಳ ಮಧ್ಯೆ ಹಾಗೂ ಎರಡೂ ಬದಿಗಳಲ್ಲಿ ಮರ ಹಾಗೂ ಕುರುಚಲು ಗಿಡಗಳು ಬೆಳೆದಿದ್ದು, ಕಾಲುವೆಗಳ ಎರಡೂ ಬದಿಗಳಲ್ಲಿ ಕೆಲವು ಕಡೆ ಕಾಂಕ್ರಿಟ್ ತಡೆಗೋಡೆ ಕುಸಿದು ಬಿದ್ದಿರುವುದು ಕಂಡುಬಂದಿರುತ್ತದೆ" ಎಂದು ವರದಿಯನ್ನು ನೀಡಿರುತ್ತಾರೆ.

4. ಆದ್ದರಿಂದ, ದಾಖಲಾತಿಗಳ ಸಮೇತ ಹಾಜರಾಗುವಂತೆ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ, ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ಇವರಿಗೆ ಆದೇಶಿಸಲಾಗಿತ್ತು. ಕಾರ್ಯಪಾಲಕ ಅಭಿಯಂತರರು ಹಾಜರಾಗಿ ಕಾಲುವೆಯ ಕಾಮಗಾರಿಯನ್ನು 2014 ರಲ್ಲಿ ಪೂರ್ಣಗೊಳಿಸಲಾಗಿದ್ದು, ಅಂತಿಮ ಬಿಲ್‌ನ್ನು ನಿಬಂಧನೆಗಳಿಗೊಳಪಟ್ಟು ಪಾವತಿಸಲಾಗಿದೆ. ಮುಂದುವರೆದು ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಶೇ.90 ರಷ್ಟು ಬಿಲ್‌ನ್ನು ಪಾವತಿ ಮಾಡಲಾಗಿರುತ್ತದೆ. ಆದ್ದರಿಂದ, ಕಾಮಗಾರಿ ನಡೆದ ಸಮಯದಲ್ಲಿ ಕರ್ತವ್ಯದಲ್ಲಿದ್ದ ಅಧಿಕಾರಿಗಳ ವಿವರಗಳನ್ನು ನೀಡುವಂತೆ ಕಾರ್ಯಪಾಲಕ ಅಭಿಯಂತರರು, ಹಾರಂಗಿ ಪುನರ್ವಸತಿ ವಿಭಾಗ, ಇವರಿಗೆ ಆದೇಶಿಸಲಾಗಿತ್ತು.

5. ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ, ಮತ್ತು ಸಹಾಯಕ ಕಾರ್ಯಪಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.2, ಹಾರಂಗಿ ನಾಲಾ ಉಪ ವಿಭಾಗ, ಕೊಣನೂರು ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರಿಗೆ ಸಂಬಂಧಿಸಿದಂತೆ ಸದರಿ ಸರಪಳಿಗಳನ್ನು ಕಾರ್ಯನಿರ್ವಹಿಸಿರುವ ಅಧಿಕಾರಿಗಳ ವಿವರ ಈ ಕೆಳಗಿನಂತಿದೆಯೆಂದು ವರದಿಯನ್ನು ಸಲ್ಲಿಸಿರುತ್ತಾರೆ.

| ಕ್ರ. ಸಂ. | ದೂರುದಾರರ ಆಕ್ಷೇಪಣೆಗಳು | ಕಾರ್ಯನಿರ್ವಹಿಸಿದ ಶಾಖಾಧಿಕಾರಿ | ಕಾರ್ಯ ನಿರ್ವಹಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು | ಷರಾ |
|---|---|---|---|---|
| 1 | ಕಟ್ಟೇಪುರ ಸಮೀಪದ ಮಲ್ಲಿನಾಥಪುರ ಮತ್ತು ಕಟ್ಟೇಪುರ ನಡುವಿನ ಭಾಗದ ಕಾಲುವೆ ಲೈನಿಂಗ್ ಹಾಳಾಗಿರುವುದು (ಕಟ್ಟೇಪುರ ಬಲದಂಡೆ ನಾಲೆ ಸರಪಳಿ 6.00 ಕಿ.ಮೀ. ರಿಂದ 6.150 ಕಿ.ಮೀ.ವರೆಗೆ) | ಶ್ರೀ.ಜಯರಾಮ್ ಸಹಾಯಕ ಇಂಜಿನಿಯರ್ | ಶ್ರೀ.ಕೆ.ಎಂ.ದೇವನಾಥ್ | |
| 2 | ರುದ್ರಪಟ್ಟಣ ಬಳಿ ಕಾಲುವೆ ಲೈನಿಂಗ್ ಹಳಾಗಿರುವುದು (ಕಟ್ಟೇಪುರ ಬಲದಂಡೆ ನಾಲೆ ಸರಪಳಿ 13.900 ಕಿ.ಮೀ. | ಶ್ರೀಮತಿ.ಕೆ.ಹೆಚ್.ಮೋಹನ ಸಹಾಯಕ ಇಂಜಿನಿಯರ್-2 | ಶ್ರೀ.ಕೆ.ಎಂ.ದೇವನಾಥ್ | |

| | | | | |
|---|---|---|---|---|
| | ರಿಂದ 13.920 ಕಿ.ಮೀ.ವರೆಗೆ) | | | |
| 3 | ಬಸವಾಪಟ್ಟಣ ಬಳಿ ಕಾಲುವೆ ಲೈನಿಂಗ ಹಾಳಾಗಿರುವುದು (ಕಟ್ಟೇಪುರ ಎಡದಂಡೆ ನಾಲೆ 15.300 ಕಿ.ಮೀ. ರಿಂದ 15.400 ಕಿ.ಮೀ. ವರೆಗೆ) | ಶ್ರೀ.ಕೆ.ಹೆಚ್.ವೆಂಕಟೇಶ್ ಕಿರಿಯ ಇಂಜಿನಿಯರ್ | ಶ್ರೀ.ಕೆ.ಎಂ.ದೇವನಾಥ್ | |
| 4 | ಅನಂದೂರು ಕಾಲುವೆಯ ತಳಭಾಗದ ಕಾಂಕ್ರೀಟು ಬೆಡ್ ಹಾಳಾಗಿರುವುದು (ಕಟ್ಟೇಪುರ ಬಲದಂಡೆ ನಾಲೆ 19.700 ಕಿ.ಮೀ ರಿಂದ19.730 ಕಿ.ಮೀ. ವರೆಗೆ) | ಶ್ರೀ.ಕೆ.ಹೆಚ್.ವೆಂಕಟೇಶ್ ಕಿರಿಯ ಇಂಜಿನಿಯರ್ | ಶ್ರೀ.ಆರ್.ಶಿವಕುಮಾರ್ | |
| 5 | ಮಲ್ಲಿರಾಜಪಟ್ಟಣ ನಾಲಾ ಬಳಿಯ ಲಕ್ಷ್ಮಣೇಶ್ವರ ದೇವಾಲಯದ ಸಮೀಮ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವ ಕನ್ಸ್ಟ್ರಕ್ಷನ್ ಯಾರ್ಡ್ ಸ್ಥಾಪಿಸಿರುವುದು | ಶ್ರೀ.ಜಿ.ಎಸ್.ಸತೀಶ್ ಸಹಾಯಕ ಇಂಜಿನಿಯರ್ | ಶ್ರೀ.ಟಿ.ಎನ್. ಕೋದಂಡರಾಮು | |
| 6 | ಕೇರಳಾಪುರ ಬಳಿ ಕಟ್ಟೇಪುರ ಎಡದಂಡೆ ನಾಲಾ ಕಾಂಕ್ರೀಟು ಲೈನಿಂಗ್ ಕುಸಿದಿರುವುದು | ಶ್ರೀ.ಎ.ಡಿ.ಜಯರಾಮ್ | ಶ್ರೀ.ಜಾಲಿಹಳ್ | |
| 7 | ರಾಮನಾಥಪುರ ಕೃಷ್ಣ ಹಾಲೋಬ್ರಿಕ್ಸ್ ಕಾರ್ಖಾನೆ ಸಮೀಪದ ನಾಲಾ ಕಾಮಗಾರಿಗೆ ಉತ್ತಮ ಗುಣಮಟ್ಟ ಗ್ರಾವೆಲ್ ಹಾಕದೆ ಕಪ್ಪು ಮಣ್ಣು ಹಕಿರುವುದು (ಕಟ್ಟೇಪುರ ಎಡದಂಡೆ ನಾಲಾ ಡರಪಳಿ 8.25 ಕಿ.ಮೀ) | ಶ್ರೀಮತಿ.ಕೆ.ಹೆಚ್.ಮೋಹನ ಸಹಾಯ ಇಂಜಿನಿಯರ್-2 | ಶ್ರೀ.ಕೆ.ಎಂ.ದೇವನಾಥ್ | |

6. ಆದ್ದರಿಂದ, ಮೇಲೆ ತಿಳಿಸಿರುವ ಅಧಿಕಾರಿಗಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿ ಅವರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು.

7. 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ 2013-14, 2014-15 ರಲ್ಲಿ ಕಟ್ಟೇಪುರ ಎಡದಂಡೆ ಹಾಗೂ ಬಲದಂಡೆ ನಾಲೆಯಲ್ಲಿ ನೀರು ಹರಿಸುವ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿರುವುದರಿಂದ, ಮತ್ತು ಹಾರಂಗ ಬಲದಂಡೆ ನಾಲೆಯ ನೀರು ಕಟ್ಟೇಪುರ ಬಲದಂಡೆ ನಾಲೆಗೆ ನುಗ್ಗಿ ಕೆಲವು ಸರಪಳಿಗಳಲ್ಲಿ ಸಿ.ಸಿ.ಲೈನ್ ಕಾಮಗಾರಿಯು ಹಾನಿಗೊಳಗಾಗಿರುತ್ತದೆಯೇ ಹೊರತು ದೂರುದಾರರು ಆಪಾದನೆ ಮಾಡಿರುವಂತೆ ಕಾಮಗಾರಿ ಕಳಪೆಯಾಗಿರುವುದಿಲ್ಲ. ಕಟ್ಟೇಪುರ ಸಮೀಪದ ಮಲ್ಲಿನಾಥಪುರ ಮತ್ತು ಕಟ್ಟೇಪುರ ನಡುವಿನ ಭಾಗದ ಕಾಲುವೆ ಲೈನ್ ಕಾಮಗಾರಿಯು ಕಟ್ಟೇಪುರ ಬಲದಂಡೆ ನಾಲೆಯ ಸರಪಳಿ 6000 ಮೀ.ನಿಂದ 6300 ಮೀ.ವರೆಗೆ ಬರುತ್ತಿದ್ದು, ಹಾಗೂ ಆ ಸಮಯದಲ್ಲಿ ಮುಂಗರು ಬೆಳೆಗೆ ನಾಲಾದಲ್ಲಿ ನೀರು ಹರಿಸಲಾಗುತ್ತಿದ್ದು, ಇದರ ಮೇಲ್ಭಾಗದಲ್ಲಿ ಕೆರೆಗಳು, ಹಾರಂಗಿ ಬಲದಂಡೆ ನಾಲೆಯ ಅಚ್ಚುಕಟ್ಟು ಪ್ರದೇಶದಿಂದ ಹೆಚ್ಚುವರಿ ನೀರು

ಹಾಗೂ ಹಿಂದಿನ ದಿನ ಸದರಿ ಅಚ್ಚುಕಟ್ಟು ಪ್ರದೇಶದಲ್ಲಿ ಅಕಾಲಿಕ ಮಳೆ ಸುರಿದ ಪರಿಣಾಮ ಒಂದೇ ಬಾರಿಗೆ ಹೆಚ್ಚುವರಿ ನೀರು ಸದರಿ ಸರಪಳಿಯಲ್ಲಿ ಮೇಲ್ಭಾಗದಿಂದ ರಭಸವಾಗಿ ಬಂದು ಸದರಿ ಸರಪಳಿಯಲ್ಲಿ ನಾಲೆಗೆ ಸೇರುತ್ತಿದ್ದ ಸ್ಥಳದಲ್ಲಿ ಪರಿವೀಕ್ಷಣಾ ಪಥದ ಲೈನಿಂಗ್ ಕಾಮಗಾರಿಯು ಹಾನಿಗೊಳಗಾಗಿರುತ್ತದೆ. ನಂತರ ಸದರಿ ಸ್ಥಳವನ್ನು ಪರಿವೀಕ್ಷಣೆಗೆ ಒಳಪಡಿಸಿ ಸರಪಳಿಯ ಕಾಮಗಾರಿಯನ್ನು ಪುನರ್ ನಿರ್ಮಿಸಲಾಗಿದೆ. ದೂರುದಾರರ ದೂರು ಸತ್ಯಕ್ಕೆ ದೂರವಾಗಿರುತ್ತದೆಯೆಂದು ಹೇಳಿರುತ್ತಾರೆ.

8. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ರುದ್ರಪಟ್ಟಣ ಬಳಿ ಕಾಲುವೆ ಲೈನಿಂಗ್ ಹಾಳಾಗಿರುವ ವಿಷಯಕ್ಕೆ ಸಂಬಂಧಿಸಿದ ನಾಲಾ ವ್ಯಾಪ್ತಿ ಕಟ್ಟೇಪುರ ಬಲದಂಡೆ ನಾಲಾ ಸರಪಳಿ 14ನೇ ಕಿ.ಮೀ.ನಲ್ಲಿ ಬರುತ್ತದೆ. ಸದರಿ ಸ್ಥಳದಲ್ಲಿ 2011–12ನೇ ಸಾಲಿನ ಮಂಜೂರಾದ ಅಂದಾಜು ಪಟ್ಟಿಯಲ್ಲಿ ನಿರ್ವಹಣಾ ಸಾಮಾಗ್ರಿಗಳನ್ನು ಗುಣ ನಿಯಂತ್ರಣ ಪರೀಕ್ಷೆಗೆ ಒಳಪಡಿಸಿಕೊಂಡು, ಫಲಿತಾಂಶ ಪಡೆದುಕೊಂಡ ಕಾಮಗಾರಿಯನ್ನು ನಿರ್ವಹಿಸಲಾಗಿತ್ತು. ಆದರೆ ಪರಿವೀಕ್ಷಣಾ ಪಥದ ಮೇಲ್ಭಾಗದಲ್ಲಿ ಹಾರಂಗಿ ಬಲದಂಡೆ ನಾಲಾ ಅಚ್ಚುಕಟ್ಟು ಪ್ರದೇಶವು ಬರುತ್ತಿದ್ದು, ಇದರಿಂದ ಹೊರಬರುವ ಹೆಚ್ಚುವರಿ ನಾಲಾ ನೀರು ಲೈನಿಂಗ್ ಕಾಮಗಾರಿಯ ಮೇಲ್ಭಾಗದಲ್ಲಿಯೇ ಹರಿದು ಕಟ್ಟೇಪುರ ಬಲದಂಡೆ ಸೇರುತ್ತಿರುತ್ತದೆ ಹಾಗೂ ಮೇಲ್ಭಾಗದಲ್ಲಿರುವ ಗೋರಿಕಟ್ಟೆ, ಊರ ಮುಂದಿನ ಕೆರೆಯ ಹೆಚ್ಚುವರಿ ನೀರು ಸಹ ಹರಿದು ಪರಿವೀಕ್ಷಣಾ ಪಥದಲ್ಲಿ ಕೊರಕಲು ಉಂಟಾಗಿರುತ್ತದೆ. ಹಾಗೂ ಮಳೆಯಿಂದಾಗಿ ನೀರು ನುಗ್ಗಿ ಹಿಂಭಾಗದ ಮಣ್ಣನ್ನು ಕೊರೆದ ಕಾರಣದಿಂದ ಲೈನಿಂಗ್ ಜಾರಿಕೊಂಡಿರುತ್ತದೆ. ಕಾಮಗಾರಿ ಇನ್ನು ಮುಕ್ತಾಯದ ಹಂತದಲ್ಲಿರುವುದರಿಂದ ಹಾಗೂ ಗುತ್ತಿಗೆ ಕರಾರಿನಲ್ಲಿ ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಕಾಮಗಾರಿ ನಿರ್ವಹಣಾ ಅವಧಿಯು ಇರುವುದರಿಂದ, ಮುಂದೆ ಉಂಟಾಗಬಹುದಾದ ಸಣ್ಣಪುಟ್ಟ ದುರಸ್ತಿ ಕಾಮಗಾರಿಗಳನ್ನು ಗುತ್ತಿಗೆದಾರರ ಹೊಣೆಗಾರಿಕೆಯಲ್ಲಿಯೇ ಪೂರ್ಣ ಗೊಳಿಸಲಾಗುವುದೆಂದು ಹೇಳಿರುತ್ತಾರೆ.

9. 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಬಸವಾಪಟ್ಟಣದ ಬಳಿ ಕಾಲುವೆ ಲೈನಿಂಗ್ ಹಾಳಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ವ್ಯಾಪ್ತಿಯು ಕಟ್ಟೇಪುರ ಬಲದಂಡೆ ನಾಲಾ ಸರಪಳಿ 15300 ಮೀ.ನಿಂದ 15400 ಮೀ.ವರೆಗೆ ಬರುತ್ತಿದ್ದು, ಕೆರೆಯಲ್ಲಿ ನೀರು ತುಂಬಿದ್ದು, ಇದರ ಸೀಪೇಜ್ ನೀರು ಯಾವಾಗಲೂ ನಾಲೆಯಲ್ಲಿರುತ್ತದೆ. ಆದಕಾರಣದಿಂದಾಗಿ ಕಾಮಗಾರಿಯನ್ನು ನಿರ್ವಹಿಸುವ ಸಂಬಂಧ ನಾಲೆಗೆ ಅಡ್ಡಲಾಗಿ ತಾತ್ಕಾಲಿಕವಾಗಿ ಸೀಪೇಜ್ ನೀರು ಬರದಂತೆ ಅಡ್ಡಕಟ್ಟೆ ನಿರ್ಮಿಸಿಕೊಂಡು 2013–14ನೇ ಸಾಲಿನಲ್ಲಿ ನಿರ್ವಹಣಾ ಸಾಮಾಗ್ರಿಗಳನ್ನು ಗುಣನಿಯಂತ್ರಣ ಪರೀಕ್ಷೆಗೆ ಒಳಪಡಿಸಿಕೊಂಡು ಮಂಜೂರಾದ ಅಂದಾಜು ಪಟ್ಟಿಯಂತೆ ಪರಿವೀಕ್ಷಣಾ ಪಥದಲ್ಲಿ ನಾಲಾ ಪಾರ್ಶ್ವಕ್ಕೆ 9 ಮೀ. ಉದ್ದಕ್ಕೆ ಫೇವರ ಕಾಂಕ್ರಿಟ್ ಹಾಕಲಾಗಿದ್ದು, ಹಾಗೂ ಸೇವಾರಸ್ತೆಯ ಭಾಗದಲ್ಲಿ ಕೇವಲ ಗ್ರಾವೆಲ್ ಸೆಕ್ಷನಿಂಗ್ ಮಾತ್ರ

ನಿರ್ವಹಿಸಲಾಗಿದ್ದು, ಲೈನಿಂಗ್ ಕಾಂಕ್ರಿಟ್ ಹಾಕಲು ನಾಲೆಯಲ್ಲಿ ಫೇವರ ಯಂತ್ರೋಪಕರಣಗಳನ್ನು ಫಿಕ್ಸ್ ಮಾಡಲಾಗಿತ್ತು. ಆದರೆ, ಅಂದಿನ ದಿನವೇ ತಡರಾತ್ರಿಯಲ್ಲಿ ಕೆರೆಯ ಮೇಲ್ಭಾಗದ ವ್ಯಾಪ್ತಿಯಲ್ಲಿ ಭಾರೀ ಮಳೆಯು ಸುರಿದ ಪರಿಣಾಮವಾಗಿ ಹೆಚ್ಚಿನ ಪ್ರಮಾಣದಲ್ಲಿ ನೀರು ಕೆರೆಗೆ ಬಂದು, ಕೆರ ತುಂಬಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಅಡ್ಡಗಟ್ಟೆ ಹೊಡೆದು ನಾಲಾ ತುಂಬಾ ನೀರು ಬುಂಬಿಕೊಂಡಿರುತ್ತದೆ. ಹಾಗೂ ಫೇವರ್ ಲೈನಿಂಗ್ ಯಂತ್ರೋಪಕರಣಗಳು ಸಹ ನೀರಿನಲ್ಲಿ ಮುಳುಗಿರುತ್ತದೆ. ಆದರೆ ನಿರ್ಮಿಸಿದ್ದ ಕಾಂಕ್ರಿಟ್‌ಗೆ ಯಾವುದೇ ಹಾನಿಯಾಗಿರುವುದಿಲ್ಲ. ಸೇವಾರಸ್ತೆಯ ಭಾಗದಲ್ಲಿ ಯಾವುದೇ ಕಾಂಕ್ರಿಟ್ ಅಳವಡಿಸಿರುವುದಿಲ್ಲ ಹಾಗೂ ಅಕಾಲಿಕ ಮಳೆಯು ಸುರಿದ ಪ್ರಯುಕ್ತ ತಾತ್ಕಾಲಿಕವಾಗಿ ನಿರ್ಮಿಸಿದ್ದ ಅಡ್ಡಗಟ್ಟೆಯು ಹೊಡೆದು ನಾಲಾ ತುಂಬಾ ನೀರು ತುಂಬಿಕೊಂಡಿರುತ್ತದೆ. ಕಳಪೆ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆನ್ನುವುದಕ್ಕೆ ಯಾವುದೇ ನಿದರ್ಶನಗಳು ಇರುವುದಿಲ್ಲ. ಅಕಾಲಿಕ ಮಳೆಯಿಂದ ಹೆಚ್ಚುವರಿ ನೀರು ಬಂದು ಲೈನಿಂಗ್ ಹಿಂಭಾಗದಲ್ಲಿ ಕ್ಯಾವಿಟಿ ಉಂಟಾಗಿರುತ್ತದೆ. ದೂರುದಾರರ ದೂರು ಸತ್ಯಕ್ಕೆ ದೂರವಾಗಿರುತ್ತದೆಯೆಂದು ಹೇಳಿರುತ್ತಾರೆ.

10. 4ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಅವರು ದಿ.6/7/12 ರಲ್ಲಿ ಹಾರಂಗಿ ಉಪ ವಿಭಾಗ ಸಂ.2 ಕೋಣನೂರು ಕಚೇರಿಯಿಂದ ಅವರು ವರ್ಗಾವಣೆ ಹೊಂದಿ ಬಿಡುಗಡೆ ಹೊಂದಿರುತ್ತಾರೆ. ದೂರುದಾರರು ದಿ.31/5/14 ರಂದು ದೂರನ್ನು ದಾಖಲಿಸಿರುತ್ತಾರೆ. ದೂರಿನಲ್ಲಿ ಪ್ರಸ್ತಾಪಿಸಿರುವ ಕಾಮಗಾರಿ ಸ್ಥಳವು ಅವರ ಕಾರ್ಯವ್ಯಾಪ್ತಿಗೆ ಸಂಬಂಧಿಸಿರುವುದಿಲ್ಲವೆಂದು ಹೇಳಿರುತ್ತಾರೆ.

11. 5ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಅವರು ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತಿ ನಂ.2 ಹಾ.ಉ.ನ.ಉಪವಿಭಾಗ, ರಾಮನಾಥಪುರ ಕಚೇರಿ ವ್ಯಾಪ್ತಿಗೆ ಕಟ್ಟೇಪುರ ಅಣೆಕಟ್ಟಿನ ಆಧುನೀಕರಣ ಕಾಮಗಾರಿಯ ಎಡದಂಡೆ ನಾಲೆಯ ಸರಪಳಿ 20 ಕಿ.ಮೀ.ನಿಂದ 37 ಕಿ.ಮೀ.ವರೆಗೆ ಹಂಚಿಕೆ ಮಾಡಿದ್ದು, ಆದರೆ ಸರಪಳಿ 24 ಕಿ.ಮೀ.ನಿಂದ 31 ಕಿ.ಮೀ. ವರೆಗೆ ಮಾತ್ರ ಕಾಮಗಾರಿ ನಿರ್ವಹಿಸಿದ್ದು, ದೂರುದಾರರು ನೀಡಿರುವ ದೂರಿನಲ್ಲಿನ ಸರಪಳಿಗಳು ಅವರ ಕಚೇರಿಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಹೇಳಿರುತ್ತಾರೆ.

12. 7ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಕಟ್ಟೇಪುರ ಎಡದಂಡೆ, ಬಲದಂಡೆ ನಾಲಾ ಆಧುನೀಕರಣ ಕಾಮಗಾರಿ ಕಳಪೆ ಕಾಮಗಾರಿಯೆಂದು ದೂರು ನೀಡಿರುವುದರಿಂದ, ದೂರಿನ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆದೇಶದ ಮೇರೆಗೆ ವಿಚಕ್ಷಣಾ ದಳ, ಜಲಸಂಪನ್ಮೂಲ ಇಲಾಖೆ, ಇವರ ಕಚೇರಿಯಿಂದ ಬಂದ ಅಧಿಕಾರಿಗಳು ಪೂರ್ಣ ಕಾಮಗಾರಿಯನ್ನು ಪರಿಶೀಲನೆ ನಡೆಸಿ ಪೊಲೀಸ್ ಮಹಾ ನಿರೀಕ್ಷಕರು, ವಿಚಕ್ಷಣಾ ದಳ, ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು ಇವರಿಗೆ ದಿ.1/1/16 ರಂದು ವರದಿಯನ್ನು ಸರ್ಕಾರಕ್ಕೆ

ಸಲ್ಲಿಸಿರುತ್ತಾರೆ. ಕಟ್ಟೇಪುರ ಸಮೀಪದ ಮಲ್ಲೀನಾಥಪುರ ಮತ್ತು ಕಟ್ಟೇಪುರ ನಡುವಿನ ಭಾಗದ ಕಾಲುವೆ ಲೈನಿಂಗ್ ಕಾಮಗಾರಿ, ರುದ್ರಪಟ್ಟಣ ಬಳಿ ಕಾಲುವೆ ಲೈನಿಂಗ್ ಕಾಮಗಾರಿ, ಬಸವಾಪಟ್ಟಣ ಬಳಿ ಕಾಲುವೆ ಲೈನಿಂಗ್ ಕಾಮಗಾರಿ, ಎದುರುದಾರರು ಕಚೇರಿಯ ಪ್ರಭಾರವನ್ನು ವಹಿಸಿಕೊಳ್ಳುವ ಮುನ್ನವೇ ಪೂರ್ಣಗೊಂಡಿರುತ್ತದೆ. ಆನಂದೂರು ಕಾಲುವೆಯ ಆಧುನೀಕರಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯಲ್ಲಿ ಇನ್‌ಲೆಟ್ ಇಲ್ಲದೇ ಇರುವ ಕಾರಣದಿಂದ ಮೇಲ್ಭಾಗದಲ್ಲಿ ಹಾರಂಗಿ ಬಲದಂಡೆ ನಾಲೆಯ ಅಚ್ಚುಕಟ್ಟಿನಿಂದ ಬರುವ ನೀರು ಲೈನಿಂಗ್ ಮೇಲ್ಭಾಗದಲ್ಲಿ ನುಗ್ಗಿ ನಾಲೆಯ ಕೆಳಭಾಗದ ಕಾಂಕ್ರಿಟ್‌ನಲ್ಲಿ ಸಣ್ಣ ಬಿರುಕುಗಳು ಉಂಟಾಗಿರುತ್ತದೆ. ಮಲ್ಲೀರಾಜಪಟ್ಟಣ ನಾಲಾ ಬಳಿಯ ಲಕ್ಷ್ಮಣೇಶ್ವರ ದೇವಾಲಯದ ಸಮೀಪ ಸ್ಥಾಪಿಸಿರುವ ಕನ್ಸ್ಟ್ರಕ್ಷನ್ ಯಾರ್ಡ್, ರಾಮನಾಥಪುರ ಕೃಷ್ಣ ಹಲೋಬಿಕ್ಸ್ ಕಾರ್ಖಾನೆ ಸಮೀಪ ನಾಲಾ ಕಾಮಗಾರಿ, ಹಾಗೂ ಬಸವಾಪಟ್ಟಣ ಮುಖ್ಯ ರಸ್ತೆಯಲ್ಲಿರುವ ಸೇತುವ ಬಳಿ ನಿರ್ಮಿಸಿರುವ ನಾಲಾ ಲೈನ್ ಕೆಲಸದ ಕಾಮಗಾರಿ ಎದುರುದಾರರು ಕಚೇರಿಯ ಪ್ರಭಾರವನ್ನು ವಹಿಸಿಕೊಳ್ಳುವ ಮುನ್ನವೇ ಪೂರ್ಣಗೊಂಡಿರುತ್ತದೆ. ಮಳೆಯಿಂದಾಗಿ ಸಿ.ಸಿ.ಲೈನ್ ಕಾಮಗಾರಿಯು ಹಾನಿಗೊಳಗಾಗಿರುತ್ತದೆಯೇ ಹೊರತು ಕಾಮಗಾರಿಯು ಕಳಪೆಯಾಗಿರುವುದಿಲ್ಲವೆಂದು ಹೇಳಿರುತ್ತಾರೆ.

13. 8ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರ ದೂರನ್ನು ಪರಿಶೀಲಿಸಿದಾಗ, ಅದರಲ್ಲಿ ಅವರ ಹೆಸರನ್ನು ನಮೂದು ಮಾಡಿರುವುದಿಲ್ಲ. ಆದ್ದರಿಂದ, ಅವರನ್ನು ಪ್ರಕರಣದಿಂದ ಕೈಬಿಡಬೇಕೆಂದು ಕೋರಿರುತ್ತಾರೆ.

14. 6 ಮತ್ತು 9ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

15. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ದಿ.24/5/2010 ರಂದು ಕಟ್ಟೇಪುರ ಎಡ ಹಾಗೂ ಬಲದಂಡೆ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು 16 ತಿಂಗಳ ಕಾಲಾವಧಿಯನ್ನು ನೀಡಿ ಮೆ:ಎಸ್.ಎನ್.ಸಿ.ಪವರ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ವಹಿಸಿಕೊಡಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿ ಅಂಶವನ್ನು ಗಮನಿಸಿದಾಗ, ಸುಮಾರು 7 ವರ್ಷಗಳು ಕಳೆದರೂ ಸಹ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲವೆಂದು ಕಂಡುಬರುತ್ತದೆ. ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸದೆ ಇರುವ ಗುತ್ತಿಗೆದಾರರ ವಿರುದ್ಧ ಎದುರುದಾರರು ಯಾವುದೇ ಕ್ರಮವನ್ನು ಕೈಗೊಳ್ಳದೆ ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ.

16. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಕಾಲುವೆಯ ಎರಡೂ ಬದಿಗಳಲ್ಲಿ ಹಾಕಲಾಗಿರುವ ಸಿಮೆಂಟ್ ಕಾಂಕ್ರಿಟ್ ಬಿರುಕು ಬಿಟ್ಟಿರುವ ಅಂಶ ಹಾಗೂ ಕಾಲುವೆಯ

ಎರಡೂ ಬದಿಗಳಲ್ಲಿ ಕಾಂಕ್ರೀಟ್ ತಡೆಗೋಡೆ ಅಲ್ಲಲ್ಲಿ ಕುಸಿದಿರುವುದು ಕಂಡುಬರುತ್ತದೆ. ಆದ್ದರಿಂದ, ನಾಲೆಯ ಕಾಮಗಾರಿಯು ಕಳಪೆಯಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಸದರಿ ನಾಲೆಯ ಕಾಮಗಾರಿ ಪೂರ್ಣಗೊಂಡಿರದೇ ಇದ್ದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಶೇ.90 ರಷ್ಟು ಹಣವನ್ನು ಪಾವತಿ ಮಾಡಿರುವ ಅಂಶವು ಕಾರ್ಯಪಾಲಕ ಅಭಿಯಂತರರು ದಿ.26/12/17 ರಂದು ನೀಡಿರುವ ಹೇಳಿಕೆಯಲ್ಲಿ ಕಂಡುಬರುತ್ತದೆ. ಅದನ್ನು ಗಮನಿಸಿದಾಗ, ನಿಗದಿತ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸದೇ ಇದ್ದರೂ ಸಹ ಕಾಲಕಾಲಕ್ಕೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿ ಎದುರುದಾರರು ಕರ್ತವ್ಯಲೋಪ ಎಸಗಿರುವ ಅಂಶ ಕಂಡುಬರುತ್ತದೆ. ಕಾರ್ಯಪಾಲಕ ಅಭಿಯಂತರರು, ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.2, ಹಾರಂಗಿ ನಾಲಾ ಉಪ ವಿಭಾಗ, ಕೊಣನೂರು ಇವರು ಸಲ್ಲಿಸಿರುವ ವರದಿಯಲ್ಲಿ 1 ರಿಂದ 9ನೇ ಎದುರುದಾರರು ಕಟ್ಟೇಪುರದ ಕಾವೇರಿ ನದಿಯ ಎಡದಂಡೆ ಹಾಗೂ ಬಲದಂಡೆಯ ಸರಪಳಿಗಳ ಕಾರ್ಯ ನಿರ್ವಹಿಸಿರುವ ಅಧಿಕಾರಿಗಳಾಗಿರುತ್ತಾರೆಂದು ಹೇಳಿರುವುದರಿಂದ, ಕಾಮಗಾರಿಯ ಅವರ ವ್ಯಾಪ್ತಿಯಲ್ಲಿ ಬರುವುದಿಲ್ಲ ಮತ್ತು ಎದುರುದಾರರು ಕರ್ತವ್ಯಕ್ಕೆ ಹಾಜರಾಗುವ ಮೊದಲೇ ಕಾಮಗಾರಿ ಪೂರ್ಣಗೊಂಡಿರುತ್ತದೆಯೆಂದು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಗಣಿಸಲು ಸಾಧ್ಯವಿಲ್ಲ.

17. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕಾಮಗಾರಿಯು ಇನ್ನೂ ಮುಕ್ತಾಯದ ಹಂತದಲ್ಲಿರುವುದರಿಂದ ಮತ್ತು ಗುತ್ತಿಗೆ ಕರಾರಿನಲ್ಲಿ ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಕಾಮಗಾರಿ ನಿರ್ವಹಣಾ ಅವಧಿ ಇರುವುದರಿಂದ, ಕಾಲುವೆ ಲೈನಿಂಗ್ ಹಾಳಾಗಿರುವ ಭಾಗದಲ್ಲಿ ಸದರಿ ಕಾಮಗಾರಿಯನ್ನು ದುರಸ್ತಿ ಗೊಳಿಸಿ ಸರಿಪಡಿಸುವಂತೆ ಗುತ್ತಿಗೆದಾರರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 12/9

(ನ್ಯಾಯಮೂರ್ತಿ ಎನ್.ಆನಂದ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.